



# ಹೊಸ ನಿರೀಕ್ಷೆ ಬಿತ್ತಿದ ಶಶಾಂಕ್-ಡಾಲಿ

'ಡೇರ್‌ಡೆವಿಲ್ ಮುಸ್ತಾಫಾ' ಸಿನಿಮಾ ನಿರ್ದೇಶಕ ಶಶಾಂಕ್ ಸೋಗಲ್ ಹಾಗೂ ನಟ ಡಾಲಿ ಧನಂಜಯ್ ಕಾಂಬಿನೇಷನ್‌ನಲ್ಲಿ ಹೊಸ ಸಿನಿಮಾ ಮೂಡಿಬರುತ್ತಿದ್ದು, ಈ ಸಿನಿಮಾದಲ್ಲಿ ಡಾಲಿ ರಾಜಕಾರಣಿ ಪೋಷಾಕು ಧರಿಸುತ್ತಿದ್ದಾರೆ.

ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಘೋಷಣೆಯಾಗಿದ್ದು, ಸಿನಿಮಾಗೆ 'ಜಿಂಗೋ' ಎಂದು ಹೆಸರಿಡಲಾಗಿದೆ. 'ಜಿಂಗೋ ಎಂದರೆ ವ್ಯಕ್ತಿಯೊಬ್ಬನ ಅಡ್ಡ ಹೆಸರು. ಈತ ರಾಜಕಾರಣಿಯಾ ಅಥವಾ ಹೋರಾಟಗಾರನಾ ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು' ಎಂದು ಕುತೂಹಲ ಬಿತ್ತಿದೆ ಸಿನಿಮಾ ತಂಡ.

ಚಿತ್ರಕ್ಕೆ ಹ್ಯಾರಿಸ್ ಅಹಮದ್ ಕಥೆ, ಚಿತ್ರಕಥೆ ಬರೆದಿದ್ದು, ಬಿ. ನರೇಂದ್ರ ರೆಡ್ಡಿ ಹಾಗೂ ಡಾಲಿ ಧನಂಜಯ ಬಂಡವಾಳ ಹೂಡುತ್ತಿದ್ದಾರೆ. ಶಶಾಂಕ್ ಸೋಗಲ್ ನಿರ್ದೇಶನದ ಚೊಚ್ಚಲ 'ಡೇರ್‌ಡೆವಿಲ್ ಮುಸ್ತಾಫಾ' ಸಿನಿಮಾವನ್ನು ಡಾಲಿ ಧನಂಜಯ್ ತಮ್ಮ ಡಾಲಿ ಪಿಕ್ಚರ್ಸ್ ವತಿಯಿಂದ ಬಿಡುಗಡೆ ಮಾಡಿದ್ದರು. ಸಿನಿಮಾ ಒಳ್ಳೆಯ ಹೆಸರನ್ನೂ ಮಾಡಿ, ಹಲವು ಪ್ರಶಸ್ತಿಗಳನ್ನು ಬಾಚಿಕೊಂಡಿತ್ತು. ಇದೀಗ ಈ ಇಬ್ಬರ ಕಾಂಬಿನೇಷನ್‌ನಲ್ಲಿ ಸಿನಿಮಾ ಮೂಡಿಬರುತ್ತಿರುವುದು ಹೊಸ ಪ್ರಯೋಗವೊಂದರ ನಿರೀಕ್ಷೆಯನ್ನೂ ಪ್ರೇಕ್ಷಕರಲ್ಲಿ ಹುಟ್ಟುಹಾಕಿದೆ.





# ಸಿನಿಮಾ ಸಖ್ಯದ ಶರಣ್ಯ

ಈಚೆಗೆ ಬಿಡುಗಡೆಯಾದ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ನಟಿ ಶರಣ್ಯ ಶೆಟ್ಟಿ ಅವರ ಹಾದಿಯಲ್ಲೀಗ ಮತ್ತೆರಡು ಸಿನಿಮಾಗಳು ಸೇರ್ಪಡೆಯಾಗಿವೆ. ಸದ್ಯ ಮೂರು ಪ್ರಾಜೆಕ್ಟ್‌ಗಳಲ್ಲಿ ಅವರು ತೊಡಗಿಕೊಂಡಿದ್ದು, ವಿಕಾಸ್ ಪುಷ್ಪಗಿರಿ ನಿರ್ದೇಶನದ, ನಟ ನವೀನ್ ಶಂಕರ್ ಅಭಿನಯದ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ತೆಲುಗು ಸಿನಿಮಾವೊಂದಕ್ಕೆ ಸಹಿ ಹಾಕಿರುವುದಾಗಿಯೂ ತಿಳಿದುಬಂದಿದೆ.

'ಕೃಷ್ಣಂ ಪ್ರಣಯ ಸಖಿ' ಸಿನಿಮಾದಲ್ಲಿ ಗ್ಲಾಮರಸ್ ಆಗಿ ಕಾಣಿಸಿಕೊಂಡಿದ್ದ ನಟಿ ಶರಣ್ಯ, ತಮ್ಮ ಸಿನಿಮಾ ಕರಿಯರ್ ಬಗ್ಗೆ ಈಗ ಇನ್ನಷ್ಟು ಸ್ಪಷ್ಟತೆ ಹೊಂದಿರುವುದಾಗಿ ಹೇಳಿದ್ದಾರೆ. ನಟ ಗಣೇಶ್ ಅವರೊಂದಿಗೆ ನಟಿಸಿದ ಅನುಭವವನ್ನೂ ಹಂಚಿಕೊಂಡಿದ್ದಾರೆ. "ಗಣೇಶ್ ಅವರೊಂದಿಗೆ ತೆರೆ ಹಂಚಿಕೊಂಡಿದ್ದು ಕನಸೊಂದು ನನಸಾದಷ್ಟು ಖುಷಿ ನೀಡಿದೆ. 'ಪ್ರೆಸೆನ್ಸ್ ಆಫ್ ಮೈಂಡ್' ಎಂಬುದು ಎಷ್ಟು ಮುಖ್ಯ ಎಂಬುದನ್ನು ಅವರಿಂದ ಕಲಿತಿದ್ದೇನೆ" ಎಂದಿದ್ದಾರೆ. ಕಿರುತೆರೆ ಹಿನ್ನೆಲೆಯಿಂದ ಬಂದ ಶರಣ್ಯಾ ಶೆಟ್ಟಿ, 1980, ನಗುವಿನ ಹೂಗಳ ಮೇಲೆ, ಹುಟ್ಟುಹಬ್ಬದ ಶುಭಾಶಯಗಳು ಸಿನಿಮಾಗಳಲ್ಲಿ ನಟಿಸಿದ್ದಾರೆ. ಚಂದನವನದಲ್ಲಿ ತಮ್ಮದೊಂದು ಛಾಪು ಮೂಡಿಸುವ ಹಂಬಲದಲ್ಲಿದ್ದಾರೆ.